# ಮತದಾರರ ಚೀಟಿ ಎನ್ನುವ ಸಂಕೀರ್ಣ ಪ್ರಕ್ರಿಯೆ

ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ನೀಡಿರುವ ಅಂಕಿಅಂಶಗಳ ಪ್ರಕಾರ 2001ರ ನಂತರ ಜನಿಸಿರುವ ಯುವಜನರಲ್ಲಿ ಶೇ. 50ಕ್ಕೂ ಹೆಚ್ಚು ಮಂದಿ ಮತದಾರರ ಪಟ್ಟಿಗೆ ತಮ್ಮ ಹೆಸರು ಸೇರಿಸಿಲ್ಲ. ಹದಿನೆಂಟು ವರ್ಷ ತುಂಬಿರುವ 15 ಲಕ್ಷಕ್ಕೂ ಹೆಚ್ಚು ತರುಣ ತರುಣಿಯರು ರಾಜ್ಯದಲ್ಲಿದ್ದು, ಅವರಲ್ಲಿ 7.12 ಲಕ್ಷ ಮಂದಿಯಷ್ಟೇ ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಏಕೆ ಹೀಗೆ? ನಮ್ಮ ಯುವಜನರಿಗೆ ರಾಜಕಾರಣದ ಬಗ್ಗೆ ಅನಾಸಕ್ತಿಯೇ? ವಸ್ತುಸ್ಥಿತಿ ಹಾಗೇನೂ ಇದ್ದಂತಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿನ ರಾಜಕೀಯ ಆಧರಿತ ಚರ್ಚೆಗಳಲ್ಲಿ ಯುವಮನಸ್ಸುಗಳ ಪಾಲ್ಗೊಳ್ಳುವಿಕೆ ಎದ್ದುಕಾಣುವಂತಿದೆ. ಮುದ್ರಣ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಚರ್ಚೆಗಳಲ್ಲೂ ಅವರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿದೆ. ಎಲ್ಲರ ಜೀವನವನ್ನು ಒಂದಲ್ಲಾ ಒಂದು ಬಗೆಯಲ್ಲಿ ರಾಜಕಾರಣ ಆವರಿಸಿಕೊಂಡಿರುವ ಸಂದರ್ಭದಲ್ಲಿ ರಾಜಕಾರಣದ ಬಗ್ಗೆ ಯುವಜನ ಅನಾಸಕ್ತಿ ತಾಳುವುದು ಅಸಾಧ್ಯ. ವಸ್ತುಸ್ಥಿತಿ ಹೀಗಿರಬೇಕಾದರೆ ಮತದಾರರ ಪಟ್ಟಿಗೆ ಹೆಸರು ಸೇರಿಸಲು ಮಾತ್ರ ಹಿಂದೇಟು ಹಾಕುತ್ತಿರುವುದು ಏಕೆ? ಮತದಾರರ ಪಟ್ಟಿಗೆ ಹೆಸರು ಸೇರಿಸುವ ಪ್ರಕ್ರಿಯೆ ಅನಗತ್ಯವಾಗಿ ಸಂಕೀರ್ಣವಾಗಿರುವುದೇ ಈ ಪ್ರಶ್ನೆಗೆ ಉತ್ತರವಾಗಿದೆ.


ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾವಣೆಗೆ ಎರಡು ವಿಧಾನಗಳಿವೆ. ಆನ್‌ಲೈನ್ ಮೂಲಕ ಹೆಸರು ನೋಂದಾಯಿಸುವುದು ಒಂದು ಬಗೆಯಾದರೆ, ಪಾಲಿಕೆ ಅಥವಾ ಪೌರಾಡಳಿತ ಕಚೇರಿಗಳಲ್ಲಿ ಅರ್ಜಿ ಸಲ್ಲಿಸುವುದು ಇನ್ನೊಂದು ಬಗೆ. ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸುವವರ ಸಂಖ್ಯೆ ತೀರಾ ಕಡಿಮೆ ಎಂದು ಚುನಾವಣಾಧಿಕಾರಿ ಹೇಳಿದ್ದಾರೆ. ಬಹುತೇಕ ಯುವಜನರ ಕೈಗಳಲ್ಲಿ ಸ್ಮಾರ್ಟ್ ಫೋನ್‌ಗಳಿರುವ ಸಂದರ್ಭದಲ್ಲಿ, ಅವರು ಆನ್‌ಲೈನ್ ಮೂಲಕ ಹೆಸರು ನೋಂದಾಯಿಸುತ್ತಿಲ್ಲ ಎಂದರೆ ಆ ಪ್ರಕ್ರಿಯೆ ಸರಳವಾಗಿಲ್ಲ ಎಂದೇ ಅರ್ಥ. ಕೆಲವೊಮ್ಮೆ ಎರಡು ಮೂರು ಬಾರಿ ಹೆಸರು ನೋಂದಾಯಿಸಿದರೂ ಮತದಾರರ ಚೀಟಿಯಲ್ಲಿ ಮಾತ್ರ ಹೆಸರು ದಾಖಲಾಗುವುದಿಲ್ಲ. ಗೊಂದಲ ಉಂಟಾದಾಗ ಕಾಲ್‌ಸೆಂಟರ್‌ಗೆ ಕರೆ ಮಾಡಿದರೆ ಸೂಕ್ತ ಉತ್ತರ ದೊರೆಯುವುದಿಲ್ಲ. ಪೌರಾಡಳಿತ ಕಚೇರಿಗಳಲ್ಲಂತೂ ಮತ್ತೂ ಅಧ್ವಾನದ ಸ್ಥಿತಿ. ಹೆಸರು ನೋಂದಾವಣೆ ಪ್ರಕ್ರಿಯೆ ಒಮ್ಮೆಗೆ ಮುಗಿಯುವಂತಹದ್ದಲ್ಲ. ‘ಅರ್ಜಿ ನಮೂನೆ ಲಭ್ಯವಿಲ್ಲ’, ‘ಅರ್ಜಿ ವಿತರಿಸುವ ವ್ಯಕ್ತಿ ರಜೆಯಲ್ಲಿದ್ದಾರೆ’, ‘ಬೆಳಿಗ್ಗೆ ಬನ್ನಿ, ಮಧ್ಯಾಹ್ನ ಬನ್ನಿ’ ಹೀಗೆ ಹಲವು ಸಬೂಬು ಎದುರಾಗುತ್ತವೆ. ಎರಡು ಮೂರು ಬಾರಿ ಎಡತಾಕಿ ಅರ್ಜಿ ಸಲ್ಲಿಸಿದರೂ ಪಟ್ಟಿಯಲ್ಲಿ ಹೆಸರು ಕಾಣಿಸಿಕೊಳ್ಳುವುದು ಖಾತರಿಯಿಲ್ಲ. ಅದೃಷ್ಟ ಸರಿಯಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಕೊಂಡರೂ ವೈಯಕ್ತಿಕ ವಿವರಗಳು ಸರಿಯಾಗಿರುತ್ತವೆ ಎಂದು ನಿರೀಕ್ಷಿಸುವಂತಿಲ್ಲ. ಕಾಗುಣಿತ ದೋಷಗಳು ಸಾಮಾನ್ಯ. ಹೆಸರು ಮೊಟಕಾಗುವುದು, ಸಂಬಂಧಗಳು ಬದಲಾಗುವುದು, ಒಂದೇ ಮನೆಯ ಸದಸ್ಯರ ಹೆಸರುಗಳು ಬೇರೆ ಬೇರೆ ಬೂತ್‌ಗಳಲ್ಲಿ ಹಂಚಿಹೋಗುವುದು– ಹೀಗೆ ಮತದಾರರ ಪಟ್ಟಿಯೆನ್ನುವುದು ಗೊಂದಲಪುರಿಯೂ ಹೌದು. ಹೆಸರು ನೋಂದಾವಣೆಯಾದ ಬಳಿಕ ‘ಮತದಾರರ ಚೀಟಿ’ ಪಡೆಯಲು ಮತ್ತೊಂದು ಸುತ್ತಿನ ಅಲೆದಾಟ ನಡೆಸಬೇಕು. ಕೆಲವೊಮ್ಮೆ ವರ್ಷಗಟ್ಟಲೆ ಅಲೆದರೂ ಮತದಾರರ ಚೀಟಿ ಕೈಗೆ ಬರುವುದಿಲ್ಲ.

ಸಾಮಾನ್ಯ ಜನರ ಪಾಲಿಗೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸುವುದು ತಾಳ್ಮೆಯನ್ನು ಬೇಡುವ ಹಾಗೂ ಅಲೆದಾಟದ ಕಸರತ್ತಿನ ಕೆಲಸ. ಮತದಾರರ ಚೀಟಿ ಪಡೆಯುವುದನ್ನು ಸಂಕೀರ್ಣ ಪ್ರಕ್ರಿಯೆಯನ್ನಾಗಿಸಿರುವ ವ್ಯವಸ್ಥೆಯಲ್ಲೇ ನಕಲಿ ಮತದಾರರು ಹಾಗೂ ಮತಚೀಟಿಗಳು ದೊಡ್ಡ ಪ್ರಮಾಣದಲ್ಲಿ, ಪ್ರತಿ ಚುನಾವಣೆ ಸಂದರ್ಭದಲ್ಲೂ ಬಯಲಿಗೆ ಬೀಳುವುದು ಪ್ರಜಾಪ್ರಭುತ್ವದ ಚೋದ್ಯವೇ ಸರಿ. ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮತದಾರರ ಚೀಟಿಗಳನ್ನು ಅಕ್ರಮವಾಗಿ ತಯಾರು ಮಾಡಿಕೊಡುವ ದೊಡ್ಡ ಜಾಲ ಬೆಂಗಳೂರಿನಲ್ಲಿ ಪತ್ತೆಯಾಗಿತ್ತು ಹಾಗೂ ಸಾವಿರಾರು ಗುರುತಿನ ಪತ್ರಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ರಾಜಕಾರಣಿಗಳಿಗೆ ನಕಲಿ ಮತದಾರರನ್ನು ರೂಪಿಸುವುದರಲ್ಲಿ ಆಸಕ್ತಿಯೇ ಹೊರತು, ಅಸಲಿ ಮತದಾರರನ್ನು ಹೆಚ್ಚಿಸುವ ಬಗ್ಗೆ ಅಷ್ಟಾಗಿ ಕಾಳಜಿಯಿಲ್ಲ. ಲೋಕಸಭಾ ಚುನಾವಣೆ ಸನ್ನಿಹಿತವಾಗಿರುವ ಸಂದರ್ಭದಲ್ಲಿ ಮತದಾರರ ಪಟ್ಟಿಗಳನ್ನು ಪರಿಷ್ಕರಿಸುತ್ತಿರುವ ಚುನಾವಣಾ ಆಯೋಗ, ಜನರ ನಿರಾಸಕ್ತಿಯ ಬಗ್ಗೆ ಮಾತನಾಡಿದರಷ್ಟೇ ಸಾಲದು; ತನ್ನ ಕಾರ್ಯವೈಖರಿಯನ್ನು ಮತ್ತಷ್ಟು ಸಮರ್ಪಕ ಹಾಗೂ ಸರಳವಾಗಿಸುವ ಬಗ್ಗೆ ಪ್ರಯತ್ನ ನಡೆಸಬೇಕು. ಗುರುತಿನ ಪತ್ರ ಪಡೆಯಲು ಸಾರ್ವಜನಿಕರು ಕಚೇರಿಗಳಿಗೆ ಅಲೆಯುವುದರ ಬದಲು, ಅಧಿಕಾರಿಗಳೇ ಜನರ ಬಳಿಗೆ ಹೋಗುವಂತಾಗಬೇಕು.

■ ರಘುನಾಥ ಚ.ಹ.

ರಾಜಕಾರಣಿಗಳಿಗೆ ನಕಲಿ ಮತದಾರರನ್ನು ರೂಪಿಸುವುದರಲ್ಲಿ ಆಸಕ್ತಿಯೇ ಹೊರತು, ಅಸಲಿ ಮತದಾರರನ್ನು ಹೆಚ್ಚಿಸುವ ಬಗ್ಗೆ ಅಷ್ಟಾಗಿ ಕಾಳಜಿಯಿಲ್ಲ. ಮತದಾರರ ಪಟ್ಟಿಗಳನ್ನು ಪರಿಷ್ಕರಿಸುತ್ತಿರುವ ಚುನಾವಣಾ ಆಯೋಗ, ಜನರ ನಿರಾಸಕ್ತಿಯ ಬಗ್ಗೆ ಮಾತನಾಡಿದರಷ್ಟೇ ಸಾಲದು; ತನ್ನ ಕಾರ್ಯವೈಖರಿಯನ್ನು ಮತ್ತಷ್ಟು ಸಮರ್ಪಕ ಹಾಗೂ ಸರಳವಾಗಿಸುವ ಬಗ್ಗೆ ಪ್ರಯತ್ನ ನಡೆಸಬೇಕು.



ಈಶ್ವರ